ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು - 560 001.**

ಸಂಖ್ಯೆ: ಸಿ1(3)/ಆಂ.ದೂ.ಸಮಿತಿ/2023-24 E-1100719 ದಿನಾಂಕ: 04/10/2024

## ಅಧಿಕೃತ ಜ್ಞಾಪನ

**ವಿಷಯ:** ಶಾಲಾ ಶಿಕ್ಷಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ಅಧಿಕಾರಿ/ಸಿಬ್ಬಂದಿಗಳ ದೂರುಗಳನ್ನು ಪರಿಶೀಲಿಸಲು ಲೈಂಗಿಕ ಕಿರುಕುಳ (ತಡೆ, ನಿಯಂತ್ರಣ ಮತ್ತು ನಿವಾರಣೆ) ಕಾಯ್ದೆ-2013 ರಡಿ ಆಂತರಿಕ ದೂರು ಸಮಿತಿ ಪುನರ್ ರಚನೆ ಬಗ್ಗೆ.

**ಉಲ್ಲೇಖ:** 1.ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಕಾವೇರಿ ಭವನ ಕೆ.ಜಿ.ರಸ್ತೆ, ಬೆಂಗಳೂರು ರವರ ಪತ್ರ ಸಂಖ್ಯೆ:ಕ.ರಾ.ಮ.ಆ/ SHW/ಸ.ಪ್ರ/2023-24 ದಿನಾಂಕ : 02-06-2023

2.ಸರ್ಕಾರಿ ಅದೇಶ ಸಂಖ್ಯೆ: ಮಮಇ/28/ರಾಮಆ/2015 ಬೆಂಗಳೂರು, ದಿನಾಂಕ: 18/11/2015

3.ಈ ಕಛೇರಿ ಅಧಿಕೃತ ಜ್ಞಾಪನ ಸಂಖ್ಯೆ: ಸಿ1(3)60/ದೂ.ಸಮಿತಿ/2023-24/E-1100719 ದಿನಾಂಕ:20/06/2023.

4. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 152 ಅಸೇವ 2023 ದಿನಾಂಕ: 23/06/2024

******

ಶಾಲಾ ಶಿಕ್ಷಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ಅಧಿಕಾರಿ/ಶಿಕ್ಷಕರು/ಸಿಬ್ಬಂದಿಗಳಿಗೆ, ಸಹೋದ್ಯೋಗಿಗಳಿಗೆ ವಿನಾಕಾರಣ ಕಿರುಕುಳ ನೀಡುವುದು, ಅಸಭ್ಯ ವರ್ತನೆ, ಮಾನಸಿಕ ಹಿಂಸೆ, ದುರುದ್ದೇಶ ಪೂರ್ವಕವಾಗಿ ಕೆಲಸಕ್ಕೆ ಅಡಚಣೆ ಉಂಟು ಮಾಡುವುದು ಹಾಗೂ ಲೈಂಗಿಕ ದೌರ್ಜನ್ಯ ಮುಂತಾದ ಘಟನೆಗಳಿಗೆ ಸಂಬಂಧಿಸಿದಂತೆ ಸ್ವೀಕೃತವಾದ ದೂರುಗಳನ್ನು ಪರಿಹರಿಸಲು ಉಲ್ಲೇಖ-2ರ ಸರ್ಕಾರದ ಆದೇಶದನ್ವಯ ಆಂತರಿಕ ದೂರು ಸಮಿತಿಯನ್ನು ಇಲಾಖೆಯಲ್ಲಿ ಉಲ್ಲೇಖ-3ರನ್ವಯ ರಚಿಸಿ ಆದೇಶಿಸಲಾಗಿತ್ತು. ಅಲ್ಲದೆ ಜಿಲ್ಲೆ/ತಾಲ್ಲೂಕು ಹಂತದಲ್ಲಿಯೂ ಸಹ ಸಮಿತಿಯನ್ನು ರಚಿಸಲು ನಿರ್ದೇಶನ ನೀಡಲಾಗಿತ್ತು.

ಕರ್ನಾಟಕ ರಾಜ್ಯ ಮಹಿಳಾ ಆಯೋಗವು ಉಲ್ಲೇಖ-1ರ ಪತ್ರದ ನಿರ್ದೇಶದನ್ವಯ ಮಹಿಳೆಯ ಹಕ್ಕುಗಳ ಬಗ್ಗೆ ಅರಿವನ್ನು ಉಂಟುಮಾಡಲು ಹಾಗೂ ದೂರುಗಳ ಮೇಲ್ವಿಚಾರಣೆ ಮಾಡಿ ಪರಿಣಾಮಕಾರಿಯಾಗಿ ಸಮರ್ಪಕವಾಗಿ, ತ್ವರಿತಗತಿಯಲ್ಲಿ ಪರಿಹರಿಸಲು ಉಲ್ಲೇಖ-03ರ ಆಂತರಿಕ ದೂರು ಸಮಿತಿಯನ್ನು ಈ ಕೆಳಕಂಡಂತೆ ಪುನರ್ ರಚಿಸಲಾಗಿದೆ.

| **ಕ್ರ. ಸಂ.** | **ಹೆಸರು ಮತ್ತು ಪದನಾಮ** | **ಆಂತರಿಕ ದೂರು ಸಮಿತಿ ಅಧ್ಯಕ್ಷರು/ಸದಸ್ಯರು** |
|---|---|---|
| 1 | ಶ್ರೀಮತಿ ವಿಜಯ ಈ ರವಿಕುಮಾರ್. **ಕೆ.ಎ.ಎಸ್.**<br>ಜಂಟಿ ನಿರ್ದೇಶಕರು (ಆಡಳಿತ),<br>ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ,<br>ನೃಪತುಂಗ ರಸ್ತೆ, ಬೆಂಗಳೂರು | ಸಮಿತಿಯ ಅಧ್ಯಕ್ಷರು |
| 2 | ಶ್ರೀಮತಿ ಉಷಾ ಎಮ್ ಡಿ<br>ಉಪನಿರ್ದೇಶಕರು ಪ್ರಾಥಮಿಕ<br>ಆಯುಕ್ತರ ಕಛೇರಿ ಶಾಲಾ ಶಿಕ್ಷಣ ಇಲಾಖೆ,<br>ಬೆಂಗಳೂರು | ಸದಸ್ಯರು |

| | | |
|---|---|---|
| 3 | ಶ್ರೀಮತಿ.ಅಲ್ಮಾಸ್ ಪರ್ವಿನ್ ತಾಜ್,<br>ಹಿರಿಯ ಸಹಾಯಕ ನಿರ್ದೇಶಕರು,<br>ಆಯುಕ್ತರ ಕಛೇರಿ ಶಾಲಾ ಶಿಕ್ಷಣ ಇಲಾಖೆ,<br>ಬೆಂಗಳೂರು | ಸದಸ್ಯರು |
| 4 | ಶ್ರೀಮತಿ ಪ್ರಭಾ ಅಲೆಕ್ಸಾಂಡರ್,<br>ಹಿರಿಯ ಸಹಾಯಕ ನಿರ್ದೇಶಕರು,<br>ಆಯುಕ್ತರ ಕಛೇರಿ ಶಾಲಾ ಶಿಕ್ಷಣ ಇಲಾಖೆ,<br>ಬೆಂಗಳೂರು | ಸದಸ್ಯರು |
| 5 | ಶ್ರೀ ಬೈಯಪ್ಪರೆಡ್ಡಿ,<br>ಹಿರಿಯ ಸಹಾಯಕ ನಿರ್ದೇಶಕರು,<br>ಆಯುಕ್ತರ ಕಛೇರಿ ಶಾಲಾ ಶಿಕ್ಷಣ ಇಲಾಖೆ,<br>ಬೆಂಗಳೂರು | ಸದಸ್ಯರು |
| 6 | ಶ್ರೀಮತಿ ರಾಘವಿ ವಿ ನಾಯಕ್,<br>ಹಿರಿಯ ಸಹಾಯಕ ನಿರ್ದೇಶಕರು,<br>ಆಯುಕ್ತರ ಕಛೇರಿ ಶಾಲಾ ಶಿಕ್ಷಣ ಇಲಾಖೆ,<br>ಬೆಂಗಳೂರು | ಸದಸ್ಯರು |
| 7 | ಶ್ರೀಮತಿ ಹರಿಣಾಕ್ಷಿ<br>ಸಹಾಯಕ ನಿರ್ದೇಶಕರು ಆಯುಕ್ತರ ಕಛೇರಿ<br>ಶಾಲಾ ಶಿಕ್ಷಣ ಇಲಾಖೆ,<br>ಬೆಂಗಳೂರು | ಸದಸ್ಯರು |
| 8 | ಶ್ರೀಮತಿ ವೆಂಕಟರತ್ನ, ಅಧೀಕ್ಷಕರು,<br>ಆಯುಕ್ತರ ಕಛೇರಿ ಶಾಲಾ ಶಿಕ್ಷಣ ಇಲಾಖೆ,<br>ಬೆಂಗಳೂರು | ಸದಸ್ಯರು |
| 9 | ಶ್ರೀಮತಿ ಡೋನಾ ಫೆರ್ನಾಂಡಿಸ್<br>ಅವೇಕ್ಷಾ ಚಾರಿಟೆಬಲ್ ಟ್ರಸ್ಟ್. ಬೆಂಗಳೂರು-25 | N.G.O ಪ್ರತಿನಿಧಿ |

ಶಾಲಾ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ದೂರುಗಳೇನಾದರೂ ಇದ್ದಲ್ಲಿ, ಹೊಸದಾಗಿ ಪುನರ್ ರಚಿತವಾಗಿರುವ ಸಮಿತಿಗೆ ಸಲ್ಲಿಸತಕ್ಕದ್ದು. ಈ ಸಮಿತಿಯು ಕಾಲಕಾಲಕ್ಕೆ ಸ್ವೀಕೃತವಾಗುವ ದೂರುಗಳನ್ನು ನಿಯಮಾನುಸಾರ ಪರಿಶೀಲಿಸಿ, ನಿಗದಿತ ಕಾಲಾವಧಿಯಲ್ಲಿ ಪರಿಹರಿಸಲು ಸೂಕ್ತ ಕ್ರಮ ಕೈಗೊಳ್ಳುವುದು.

ಮುಂದುವರೆದು, ಸಮಿತಿಯು ಈ ಕಛೇರಿ ವ್ಯಾಪ್ತಿಗೆ ಬರುವ ಯೂನಿಟ್ ಕಛೇರಿಗೆ ಸೇರಿದಂತೆ ಸ್ವೀಕೃತವಾಗುವ ದೂರುಗಳ ವಿಚಾರಣೆ ನಡೆಸಿ ಅಂತಿಮವಾಗಿ ವರದಿಯನ್ನು ಮಾನ್ಯ ಆಯುಕ್ತರ ಅವಗಾಹನೆಗೆ ತರುವಂತೆ ಸೂಚಿಸಿದೆ.

ಬಿ.ಬಿ.ಕಾವೇರಿ. ಭಾ.ಆ.ಸೇ.
ಆಯುಕ್ತರು

ಗೆ,

1. ಸಂಬಂಧಪಟ್ಟ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ,
2. ಸಂಬಂಧಪಟ್ಟ ಎಲ್ಲಾ ವಿಭಾಗೀಯ ಸಹ ನಿರ್ದೇಶಕರು / ಜಿಲ್ಲಾ ಉಪನಿರ್ದೇಶಕರು (ಆಡಳಿತ), ಮತ್ತು ತಾಲ್ಲೂಕು ಮಟ್ಟದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು

2. ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಕಾವೇರಿ ಭವನ ಕೆ.ಜಿ.ರಸ್ತೆ, ಬೆಂಗಳೂರು-09
3. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು,
4. ಅಧ್ಯಕ್ಷರು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, ಬೆಂಗಳೂರು
5. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ/ ಧಾರವಾಡ ರವರಿಗೆ ಅಗತ್ಯ ಕ್ರಮಕ್ಕಾಗಿ
6. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ
7. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ವಿಭಾಗ, ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಕಳುಹಿಸುತ್ತಾ, ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಸೂಚಿಸಿದೆ
8. ಕಛೇರಿ ಸೂಚನಾ ಫಲಕಕ್ಕೆ ತಿಳುವಳಿಕೆಗಾಗಿ
9. ಕಛೇರಿ ಪ್ರತಿ